# ಅಕ್ಷರದ ಅವ್ವ

ದೀನ ದುರ್ಬಲರನು ಅಜ್ಞಾನವು ಅಪ್ಪಿಕೊಂಡಿತು/ ದೇವಧರ್ಮ ಆಚರಿಸಿದರೂ ಅಜ್ಞಾನವು ಅಪ್ಪಿಗೊಂಡಿತು/ ಸುಖದ ಆಸೆ ಇಲ್ಲ, ದುಃಖವೇ ಸುಖ ಎಂದರು/ ವಿಧಾತ ಬಯಸಿದಂತೆ ಇರಬೇಕೆಂದು ಭಟ್ಟರು ಹೇಳಿದರು/ ಎರಡು ಸಾವಿರ ವರ್ಷಗಳ ಬೇನೆ ದೀನನಿಗೆ ಹತ್ತಿತು/ ಗುಲಾಮರನ್ನಾಗಿಸಿ ಭೂದೇವ ಅವನನ್ನು ಚೆನ್ನಾಗಿ ಅರೆದನು/ ಶೂದ್ರರ ಉದ್ಧಾರಕ್ಕೆ ಶಿಕ್ಷಣವೊಂದೇ ಮಾರ್ಗ ಇಹುದು/ ಶಿಕ್ಷಣದಿಂದ ಮನುಷ್ಯತ್ವ; ಪಶುತ್ವ ಸೋಲುತ್ತದೆ ನೋಡಿರಿ

– ಸಾವಿತ್ರಿಬಾಯಿ ಫುಲೆ

ಅನುವಾದ: ಸಂಜೂ ಕಾಟ್ಕರ್

ಭಾರತದಲ್ಲಿ ಹೆಣ್ಣುಮಕ್ಕಳ ಓದಿನ ಹಕ್ಕಿನ ಹೋರಾಟಕ್ಕಾಗಿ ನಿರಂತರ ತೊಡಗಿಸಿಕೊಂಡವರು ಸಾವಿತ್ರಿಬಾಯಿ ಫುಲೆ. ಭಾರತದ ಮೊದಲ ಶಿಕ್ಷಕಿ. ದಮನಿತ ವರ್ಗದ ಮೊದಲ ಹೆಣ್ಣು ದನಿ. ದಲಿತರ ಪಾಲಿನ ಸರಸ್ವತಿ. ಅಕ್ಷರದ ಅವ್ವ ಎಂದೆಲ್ಲಾ ಕರೆಸಿಕೊಂಡ ಸಾವಿತ್ರಿಬಾಯಿ ಫುಲೆಯವರ ಕವಿತಾ ಸಂಕಲನದಲ್ಲಿನ ಮೇಲಿನ ಕವಿತೆಯಲ್ಲಿ ಶಿಕ್ಷಣದ ಮಹತ್ವವನ್ನು ಕಾಣಬಹುದು. ಅಕ್ಷರಕ್ಕಾಗಿ ಆಕೆ ಮಾಡಿದ ಹೋರಾಟ, ಅನುಭವಿಸಿದ ಅವಮಾನ, ನೋವು ಮುಂದಿನ ತಲೆಮಾರಿಗೆ ಆದರ್ಶ. ಸವರ್ಣೀಯ ಹೆಣ್ಣುಮಕ್ಕಳೇ ಶಾಲೆಯ ಮುಖ ನೋಡಲಾಗದೆ ಮನುನಿರ್ಮಿತ ಸಿದ್ಧಾಂತಗಳಲ್ಲಿ ಬಳಲಿ ಬೆಂಡಾಗಿದ್ದರು. ಆದರೆ ಸಾವಿತ್ರಿಬಾಯಿ ದಲಿತ ಹೆಣ್ಣುಮಕ್ಕಳ, ಸವರ್ಣೀಯ ಹೆಣ್ಣುಮಕ್ಕಳ ಪಾಲಿಗೆ ಬೆಳಕಾಗಿದ್ದವರು.

ಶ್ರೇಷ್ಠರಾದ, ಹೆಸರಾಂತ ವ್ಯಕ್ತಿಗಳನ್ನು ಕುರಿತು ಚಿತ್ರಿಸುವಾಗ, ಮಾತನಾಡುವಾಗ ಅವರ ಬೆನ್ನಬದಿ ನಿಂತು ತ್ಯಾಗ ಮಾಡಿದ ಅವರ ಪತ್ನಿಯರನ್ನು ಸುಲಭವಾಗಿ ಅಲಕ್ಷಿಸಲಾಗುತ್ತದೆ. ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಈ ರೀತಿ ನಿರ್ಲಕ್ಷಿಸಲ್ಪಟ್ಟ ಪ್ರಸಿದ್ಧ ಪುರುಷರ ಹೆಂಡತಿಯರ ನಿಜದ ಚರಿತ್ರೆಯನ್ನು, ಬೆಳಕಿನ ಹಿಂದಿನ ಹಣತೆಗಳನ್ನು ಗುರುತಿಸುತ್ತಿರುವುದು ಅಭಿನಂದನೀಯ. ಅವರ ಆತ್ಮಕಥಾನಕದ ತುಣುಕುಗಳು ನಾಟಕ ಮತ್ತು ಕಾದಂಬರಿಯ ರೂಪದಲ್ಲಿ ಅನಾವರಣಗೊಳ್ಳುತ್ತಿವೆ. ಹೀಗೆ ಚರಿತ್ರೆಯಲ್ಲಿ ಮರೆತು ಹೋದ ಹೆಜ್ಜೆ ಗುರುತುಗಳು ಮಹಿಳೆಯ ಖಾಸಗಿ ಮತ್ತು ಬಹಿರಂಗ ಜೀವನದ ಸಂಘರ್ಷಗಳನ್ನು ಚಿತ್ರಿಸುತ್ತಾ ಮುಂದಿನ ಜನಾಂಗಕ್ಕೆ ಮಾದರಿಗಳಾಗುತ್ತವೆ.

ಮಹಾತ್ಮ ಗಾಂಧೀಜಿಯವರಿಂದ 'ನಿಜವಾದ ಮಹಾತ್ಮ' ಎಂದು ಕರೆಸಿಕೊಂಡ ಜ್ಯೋತಿಬಾ ಫುಲೆಯವರ ತಂದೆಯ ಹೆಸರು ಗೋವಿಂದರಾವ್. ಹೂವಿನ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರಿಂದ 'ಫುಲ್' ಎಂಬ ಅಡ್ಡ ಹೆಸರಿನಿಂದ ಜನ ಅವರನ್ನು ಗುರುತಿಸುತ್ತಿದ್ದರು. ಮರಾಠಿಯಲ್ಲಿ ಫುಲೆ ಎಂದರೆ ಹೂವು ಎಂದರ್ಥ. ಒಂಬತ್ತು ವರ್ಷದ ಸಾವಿತ್ರಿಬಾಯಿ ಹಾಗೂ ಹದಿಮೂರು ವರ್ಷದ ಜ್ಯೋತಿಬಾ ಮದುವೆ ಮಾಡಿದರು. ಮದುವೆಯ ವಯಸ್ಸು ಮೀರಿದ ಹುಡುಗಿಯನ್ನು ಘೋಡ ನವರಿ, ಹುಡುಗನನ್ನು ಘೋಡ ನವಣ ಎಂದೇ ಕರೆಯಲಾಗುತ್ತಿತ್ತು.

ಚಿಕ್ಕವಯಸ್ಸಿನಿಂದಲೇ ಸಾವಿತ್ರಿಬಾಯಿ ಹಾಗೂ ಜ್ಯೋತಿಬಾ ಸಮಾಜದ ಅನಿಷ್ಟ ಪದ್ಧತಿಗಳಾದ ಸತಿ ಪದ್ಧತಿ, ಬಾಲ್ಯ ವಿವಾಹ, ಜಾತಿ ವ್ಯವಸ್ಥೆಯಂತಹ ಆಚರಣೆಗಳನ್ನು ಪ್ರಶ್ನಿಸುವವರಾಗಿದ್ದರು. ಪ್ರತಿಭಾವಂತ ಜ್ಯೋತಿಬಾ ಶೂದ್ರರು ಅಕ್ಷರ ಕಲಿಯುವ ಬಗ್ಗೆ ಕಟುವಾಗಿ ಬ್ರಾಹ್ಮಣರು ವಿರೋಧಿಸಿದಾಗ ಶಾಲೆಯನ್ನು ಬಿಡಬೇಕಾಗುತ್ತದೆ. ಆದರೆ ಜ್ಯೋತಿಬಾ ಅವರ ನಿರಂತರ ಓದಿನ ಆಸಕ್ತಿ ತಂದೆಯ ಕಣ್ತೆರೆಸಿ ಮತ್ತೆ ಶಾಲೆಗೆ ಸೇರುವ ಅವಕಾಶ ದೊರೆಯುತ್ತದೆ. ವಿವಾಹದ ನಂತರ 1848ರಲ್ಲಿ 21ರ ಹರೆಯದಲ್ಲಿ ಶೂದ್ರರು, ಅತಿಶೂದ್ರರಿಗಾಗಿ ಜ್ಯೋತಿಬಾ ಶಾಲೆಯೊಂದನ್ನು ತೆರೆಯುತ್ತಾರೆ. ಹಿಂದೂ ಸ್ತ್ರೀಯರು, ಶೂದ್ರ ಹೆಣ್ಣುಮಕ್ಕಳು ಕಲಿಯಲೆಂದು ಶಾಲೆ ತೆರೆದಾಗ ಬೋಧಿಸಲು ಕಲಿತ ಹೆಣ್ಣು ಮಕ್ಕಳು ಸಿಗದಿದ್ದಾಗ ತಮ್ಮ ಪತ್ನಿಯನ್ನೇ ಅಕ್ಷರ ಕಲಿಸುವ ಮೂಲಕ ಕಲಿಸುವ ಶಿಕ್ಷಕಿಯನ್ನಾಗಿ ಸಿದ್ಧ ಮಾಡುತ್ತಾರೆ. ಹೀಗಾಗಿಯೇ ಭಾರತದ ಮೊಟ್ಟ ಮೊದಲ ಶಿಕ್ಷಕಿ ಎಂದು ಸಾವಿತ್ರಿಬಾಯಿಯವರನ್ನು ಗುರುತಿಸಲಾಗುತ್ತದೆ.

ಬ್ರಾಹ್ಮಣ ಪೇಶ್ವೆಗಳು ಆಳಿದ ಮಹಾರಾಷ್ಟ್ರದಲ್ಲಿ ದಲಿತರು ನಿರಂತರವಾಗಿ ನೋವು ಅನುಭವಿಸಿದವರು. ದಲಿತ ಪುಣೆಯ ಬೀದಿಗಳಲ್ಲಿ ಓಡಾಡುವಾಗ ತನ್ನ ಹಿಂದೆ ಮರದ ಸೆಲೆ ಸಹಿತವಾದ ಟೊಂಗೆಗಳನ್ನು, ಕತ್ತಿಗೆ ಉರುಳ ಗಡಿಗೆಯನ್ನು ಧರಿಸಬೇಕಾಗಿತ್ತು. ಅವರ ನೆರಳು ಬ್ರಾಹ್ಮಣರನ್ನು ಅಪವಿತ್ರಗೊಳಿಸುತ್ತದೆ ಎಂಬ ನಂಬಿಕೆ ಇದ್ದುದರಿಂದ ನೆರಳು ನೆಲದ ಮೇಲೆ ಬೀಳದ ಹೊತ್ತು ಓಡಾಡಬೇಕಿತ್ತು. ಇಂತಹ ನಿಕೃಷ್ಟ ಕಾಲದಲ್ಲಿ ಮನೆಯಿಂದ ಶಾಲೆಗೆ ಕಲಿಸಲೆಂದು ಹೊರಟ ಸಾವಿತ್ರಿಬಾಯಿ ಹಲವು ರೀತಿಯ ಸಂಕಟ, ಅವಮಾನಗಳನ್ನು ಎದುರಿಸುತ್ತಾರೆ. ಇತರ ಜಾತಿಯವರು ದಲಿತ ಶಿಕ್ಷಕಿಯೊಬ್ಬಳು ಕಲಿಸುವ ಶಾಲೆಯಲ್ಲಿ ತಮ್ಮ ಮಕ್ಕಳನ್ನು ಕಲಿಯಲು ಬಿಡುವುದಿಲ್ಲ ಎಂಬ ತೀರ್ಮಾನ ತೆಗೆದುಕೊಳ್ಳುತ್ತಾರೆ. ಪ್ರತಿನಿತ್ಯ ರಸ್ತೆಯಲ್ಲಿ ನಿಂತ ಸವರ್ಣೀಯರು ಸಗಣಿ, ಕಲ್ಲುಗಳನ್ನು ಸಾವಿತ್ರಿಬಾಯಿಗೆ ತೂರುತ್ತಾರೆ. ಆದರೆ ಅವರ ಅಚಲವಾದ ಶ್ರದ್ಧೆ, ನಿಷ್ಠೆಯ ಎದುರು ಇಂತಹ ಪ್ರಯತ್ನಗಳು ಸೋತು ಮೂಲೆ ಸೇರುತ್ತವೆ. ಒಂದು ಕಡೆ ಮತೀಯವಾದಿಗಳ ವಿರೋಧ, ಇನ್ನೊಂದು ಕಡೆ ಸುಧಾರಣಾವಾದಿಗಳ ಪ್ರಗತಿಪರ ಬೆಂಬಲದ ನಡುವೆ ಫುಲೆ ದಂಪತಿಗಳು ಗೆಲುವನ್ನು ಪಡೆಯುತ್ತಾರೆ. ಈ ಗೆಲುವಿನಿಂದಾಗಿ ಹಲವು ಕಡೆ ಹೆಣ್ಣುಮಕ್ಕಳ ಶಾಲೆಗಳ ಶಾಖೆಗಳು ಫುಲೆಯವರಿಂದ ಆರಂಭವಾಗುತ್ತವೆ. ಬ್ರಿಟಿಷ್ ಸರ್ಕಾರ ಫುಲೆ ದಂಪತಿಗಳ ನಿರಂತರ ಪರಿಶ್ರಮವನ್ನು ದಾಖಲಿಸಿದ್ದಲ್ಲದೆ ಗೌರವಿಸುತ್ತಾರೆ. ಹೀಗೆ ಭಾರತೀಯ ಶಿಕ್ಷಣ ಪರಂಪರೆಯಲ್ಲಿ ಶಿಕ್ಷಣಕ್ಕಾಗಿಯೇ ಹೋರಾಟ ನಡೆಸಿದ, ಜೀವನವನ್ನು ಮುಡುಪಾಗಿಟ್ಟ ಮೊದಲ ಶಿಕ್ಷಕಿಯೆನಿಸಿಕೊಂಡ ಸಾವಿತ್ರಿಬಾಯಿ ಫುಲೆ ನಿಜಾರ್ಥದಲ್ಲಿ ಅಕ್ಷರದ ಅವ್ವನೇ ಆಗಿದ್ದಾರೆ.

■ **ಅಮೃತಮತಿ**

## ಮಾತೇ ಮುತ್ತು

- ಒಬ್ಬ ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸಬೇಕಾದರೆ ಅವನಿಗೆ ಅಧಿಕಾರ ಕೊಟ್ಟು ನೋಡಬೇಕು.

  —ಅಬ್ರಹಾಂ ಲಿಂಕನ್

- ಸೋಮಾರಿತನ ರೋಗಗಳನ್ನು ಬರಮಾಡಿಕೊಂಡು ಆಯುಷ್ಯವನ್ನೂ ತಗ್ಗಿಸಿ ಬಿಡುತ್ತದೆ.

  —ಬೆಂಜಮಿನ್ ಫ್ರಾಂಕ್ಲಿನ್

- ಸೋರುವ ಮನೆಯಲ್ಲಿ ಮಳೆ ಬೀಳುವಂತೆ, ಬಿಗಿ ಹಿಡಿಯದ ಮನಸ್ಸಿನಲ್ಲಿ ಆಶೆಯು ಒಳನುಗ್ಗುತ್ತದೆ.

  —ಬುದ್ಧ

- ಅನುಭವಗಳೇ ಮಾನವನಿಗೆ ರೂಪವನ್ನು ನೀಡುತ್ತವೆ.

  —ಗೆಲಿಲಿಯೊ

- ಜನರು ಎಂದಿಗೂ ಅನುಭವದಿಂದ ಕಲಿತುಕೊಳ್ಳಲೆಂದು ಅನುಭವ ಕಲಿಸುತ್ತದೆ.

  —ಜಾರ್ಜ್‌ಬರ್ನಾಡ್ ಶಾ

- ಹೊಟ್ಟೆಯುರಿ ಎಂಬುದು ಇಬ್ಬಾಯ ಕತ್ತಿ, ಪ್ರಯೋಗಿಸುವವನನ್ನೂ ಅದು ಬಲಿ ತೆಗೆದುಕೊಳ್ಳುತ್ತದೆ.

  —ಸಿಪಿಕೆ

- ಕೇವಲ ಆಶಾವಾದಿಯಾಗಿಯೇ ಬದುಕುವವನ ಬಾಳು ನಿರಾಶೆಯಲ್ಲಿ ಕೊನೆಗೊಳ್ಳುತ್ತದೆ.

  —ಮಹಾತ್ಮ ಗಾಂಧಿ

- ಯಾವುದೇ ಸಂದರ್ಭದಲ್ಲೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಕೆಲಸ ಮಾತ್ರ ಮಾಡಬೇಕು.

  —ಸ್ವಾಮಿ ವಿವೇಕಾನಂದ

- ಸೌಂದರ್ಯೋಪಾಸನೆ ಮತ್ತು ಸತ್ಯೋಪಾಸನೆಗಳೇ ಕಲೆಗಳ ಅಂತಿಮ ಉದ್ದೇಶ.

  —ಶಿವರಾಮ ಕಾರಂತ